

## ನೀರು ಬಿಡಿಸಿದ ಸ್ಯಾಂಡ್ ಆರ್ಟ್

ಈಚೆಗೆ ಸುರಿದ ಭಾರೀ ಮಳೆಯಿಂದಾಗಿ ನಮ್ಮೂರಿನ ಹಳ್ಳವೊಂದು ಮೈದುಂಬಿ ಹರಿಯುತ್ತಿತ್ತು. ಇಳಿಸಂಜೆ ಹಳ್ಳನೋಡಲು ಹೋದಾಗ ಅದರ ಹರಿವು ಇಳಿದು, ದುರ್ಬಲವಾಗಿ ಹರಿಯುತ್ತಾ ನಿಧಾನಕ್ಕೆ ನಿಂತಿತು. ಮರುದಿನ ಮುಂಜಾನೆ ಹಳ್ಳದ ದಂಡೆಯಲ್ಲಿ ಚಮತ್ಕಾರವೊಂದು ಕಾಣಿಸಿತು. ನೀರು ಹೀಗೆ ನಯವಾಗಿ ಹರಿದು ಹೋಗುವಾಗ ತನ್ನಡಿಗಿದ್ದ ಮರಳಿನ ಮೇಲೆ ಸುಂದರವಾದ ಕಲೆಯನ್ನು ಅರಳಿಸಿತ್ತು. ಮೃದುವಾದ ಮಣ್ಣು ಮಿಶ್ರಿತ ಮರಳಿನ ಅಂಗಳದ ಮೇಲೆ ತನ್ನಿಷ್ಟದ ರಂಗವಲ್ಲಿ ಬಿಡಿಸಿ, ನೋಡುಗರ ಗಮನಸೆಳೆಯುವಂತೆ ಮಾಡಿತ್ತು. ಮಕ್ಕಳ ಕಣ್ಣಲ್ಲಿ ಹಸಿಚಾಕೊಲೇಟಿನ ಹಾಸಿಗೆಯಂತೆಯೂ, ಬೆಲ್ಲದ ಹಾಳೆಯಂತೆಯೂ ಹೀಗೆ ಅನೇಕ ಕಲ್ಪನೆಗಳನ್ನು ನೋಡುಗರ ಮನದಲ್ಲಿ ಬಿತ್ತಿತ್ತು. ಬಹುಶಃ ಪ್ರಕೃತಿ ತನ್ನೊಳಗಿನ ಅಪ್ರತಿಮ ಕಲಾವಿದನನ್ನು ನಮಗೆ ಪರಿಚಯಿಸಲು ಹೀಗೆ ಮಾಡಿರಬಹುದು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಕರಿ ತಲೆ ಕೋಗಿಲೆ ಕೀಚುಗ

ಇದು ಬಹಳ ಅಪರೂಪದ ಪಕ್ಷಿ. ಭಾರತ ಮತ್ತು ಆಗ್ನೇಯ ಏಶಿಯಾದಲ್ಲಿ ಕಂಡುಬರುತ್ತದೆ. ಕ್ಯಾಂಫೇಪಾಗಿಡೇ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಲಾಲಾಜೆ ಮೆಲೊನೆಪ್ಟೆರ. ಇವು ಹೆಚ್ಚಾಗಿ ಅರಣ್ಯದಲ್ಲಿ ಜೋಡಿಯಾಗಿ ಕಂಡು ಬರುತ್ತವೆ.

ಮಸಿ ಬಣ್ಣದ ಈ ಪಕ್ಷಿಯ ಬಾಲದ ರೆಕ್ಕೆ ಪುಕ್ಕಗಳಲ್ಲಿ ಬಿಳಿಯ ಚುಕ್ಕೆಗಳಿವೆ. ಗಂಡಿನ ತಲೆ, ಕುತ್ತಿಗೆ ಮತ್ತು ಎದೆಯ ಮೇಲ್ಭಾಗವು ಕಪ್ಪು ಬೂದು ಬಣ್ಣದಿಂದಿದ್ದೂ, ದೇಹದ ಉಳಿದ ಭಾಗ ಪೇಲವ ಬೂದು ಬಣ್ಣದ್ದಿದೆ. ಕರಿ ಬಣ್ಣದ ರೆಕ್ಕೆಗಳಿದ್ದೂ, ಹೊಟ್ಟೆಯ ಭಾಗ ಬಿಳಿಯಾಗಿದೆ. ಹೆಣ್ಣಿಗೆ ಕಪ್ಪು ಟೊಪ್ಪಿಗೆ ಇಲ್ಲ, ಬೂದು ಬಣ್ಣವಿದೆ. ಕಂದು ಬೂದು ಬಣ್ಣದ ಮೇಲ್ಭಾಗ, ಬಿಳಿಯ ಹುಬ್ಬುಗಳೂ, ಅಗಲವಾದ ಕಂದು ಪಟ್ಟಿಗಳಿರುವ ಬಫ್ ಬಿಳಿ ಕೆಳಭಾಗವುಂಟು. ಇದು ಗಟ್ಟಿಯಾಗಿ ಸಿಳ್ಳೆ ಹೊಡೆಯುತ್ತದೆ ಮತ್ತು ಕೀಟಗಳು, ಬೀಜಗಳನ್ನು ಸೇವಿಸುತ್ತದೆ. ಮಾರ್ಚ್– ಅಗಸ್ಟ್ ತಿಂಗಳಲ್ಲಿ ಗೂಡು ಕಟ್ಟುತ್ತವೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

